

ರಾಯಚೂರಿನ ಗುಬ್ಬೇರ ಬೆಟ್ಟದ ಮೇಲಿನ ಸ್ಮಾರಕ ಹಾಗೂ ದೊಡ್ಡ ತೋಪು

ಬಿರುಬಿಸಿಲಿನ ಊರಾಗ ಬಿಳಿಯಂಗಿ ಉಟ್ಟವರು, ಕಾಟನ್ ಸೀರಿ ಸುತ್ಕೊಂಡೋರು ಖಡಾ ಚಮಚ್ ಚಾ ಕುಡದು ಅರವಿ ಒಗದು ಹಾಕಿದ್ರ, ಮಾಳಗಿ ಮ್ಯಾಲೆ ಸಂಡಗಿ ಒಣಗಿಸಿಟ್ಟಿದ್ದು ಕಂಡ್ರ ತೋ... ನಿನ್ನವನ ಆಂದ್ರಂದ್ರ ರಾಯಚೂರಿಗೆ ಬಂದೇರಿ ಅಂತ ಖಾತ್ರಿ ಆಗ್ತದ...

# ಬ್ಯಾಡದು... ಹೇಳದು

**■ ರಶ್ಮಿ**


‘ಅಲ್ಲಮ್ಮಿ, ಬಿಸಿ ಅನ್ನದ. ತುಪ್ಪ, ಕಡಲೆಪುಡಿ, ಹುಂಚೆ ಖಾರ ಹಾಕಿ ಕಲಿಸಿ ಕೊಡ್ತೀನಿ. ಘಟಬ್ಯಾಳಿ ಮಾಡೀನಿ. ಮಗ್ಗಲ್ಕ ಹಾಕಲ್ಯಾ, ಮ್ಯಾಲೆ ಹಾಕಲ್ಯಾ ಗುಲಾಬಿ ಸಂಡಗಿ, ಬಳ್ಳೊಳ್ಳಿ ಸಂಡಗಿ, ಅಕ್ಕಿ ಹಪ್ಪಳ ಸುಟ್ಟುಕೊಡ್ತೀನಿ. ಬಾರಂಗೆ ಅದೆಷ್ಟು ಹೇಳಸ್ಕೊತಿ, ಒಂದಿಷ್ಟು ಉಂಡು ಅಡ್ಡಾದ್ರ ಬೇಸು...’

ಪ್ರೀತಿಯ ಕಕ್ಕಿ (ಕಾಕಾ–ಕಕ್ಕಿ, ಅಪ್ಪನ ತಮ್ಮ ಕಾಕಾ, ಅವರ ಹೆಂಡ್ತಿ ಕಕ್ಕಿ, ಅಮ್ಮನ ತಂಗಿ ಚಿಕ್ಕಮ್ಮ, ಅವರ ಗಂಡ ಚಿಕ್ಕಪ್ಪ) ಊಟಕ್ಕ ಕರದ್ರ ಚಕ್ಕಾರ ಆಡದ ಬಿಟ್ಟು ಹಸದ ಹುಲಿಹಂಗ ಜಿಗೀತಿದ್ವಿ. ರಾಯಚೂರಿನ ಬ್ಯಾಸಗಿ ಸೂಟಿ ಮಜ್ಜಾನೇ ಬ್ಯಾರೆ.

ಮ್ಯಾಳಗಿ ಮ್ಯಾಲೆ ಬಣ್ಣಬಣ್ಣದ ದಪ್ಪನ ಕೌದಿ ಹಾಸ್ಕೊಂಡು, ತೆಳ್ಳನ ಚಾದರ್ ಒಂದು ಕಾಲಮ್ಯಾಲೆ ಹಾಕ್ಕೊಂಡು ಮಲಗ್ತಿದ್ವಿ. ಬೆಳ್ಳನೆ ಬೆಳಕಾದಾಗ ಪೂರಾ ಕಣ್ಣೀ ತಗಿಯಾಕ ಆಗದ್ಹಂಗ ಸೂರ್ಯ ಬರ್ತಿದ್ದ ಅಲ್ಲಿ. ಏರು ಜವ್ವನದ ಸೂರ್ಯನೇ ಬರೂದಲ್ಲಿ. ಅರುಣರಾಗ ಅಂತೆಲ್ಲ ಹೇಳೂಹಂಗೇ ಇಲ್ಲ. ಬೆಳಗಾ ಮುಂಜೇನೆನೆ ಮಧ್ಯಾಹ್ನದ ಬಿಸಿಲಾಗೂದು ಅಲ್ಲಿ.

ಅವಾಗೆಲ್ಲ ನೀರಿನ ಟ್ಯಾಂಕ್ ಇರ್ತಿರಲಿಲ್ಲ. ಮುಂಜೇನೆ ಏಳಕ್ಕ ನೀರು ಬಂದ್ವಂದ್ರ ನಾವೆಲ್ಲ ಏಳಲೇಬೇಕಾಗ್ತಿತ್ತು. ಎದ್ದು ಮುಂಜೇನಿ ಎಲ್ಲಾ ಕೆಲಸನೂ ಮುಗಿಸಿ, ಅರವಿ ಒಗ್ಯಾಗ ಬಚ್ಚಲ ಮುಂದಿನ ಬಕೀಟಿನಾಗ ಹಾಕಲೇಬೇಕಿತ್ತು. ನೀರು ಹೋಗೂದ್ರಾಗ ಮುಂಜೇನಿ ಚಾ–ಹಾಲಿನ ಭಾಂಡೆ, ರೊಟ್ಟಿ ಕೋಣಮಗಿ ತೊಳಿಯೂದು ಮುಗಿಸಿ, ಅರವಿ ಒಗ್ಯಾಕ ನಿಂದರ್ತಿದ್ರು. ನೀರು ಹೋಗೂದ್ರೊಳಗ ಇದೊಂದು ಕೆಲಸ ಆಗಬೇಕು ಅನ್ನೂದು ಅಲ್ಲಿಯ ಅಲಿಖಿತ ನಿಯಮ. ಈಗೂ ನೋಡ್ರಿ ಬೇಕಾದ್ರ ಒಂಬತ್ತನ್ನೂದ್ರಾಗ ಮನಿ ಮಂದಿ ಸ್ನಾನ ಮುಗಿಸಿ, ಹಣೆಗೆ ಇಬ್ಬತ್ತಿ ಪಟ್ಟ ಬಳಕೊಂಡು ಶಿಸ್ತಗೆ ಊಟಕ್ಕೇನೆ ಕುಂದರ್ತಾರ. ಎಲ್ಲಾ ಮನಿಮುಂದನೂ ಒಗದು ಹಾಕಿದ ಬಟ್ಟೆಯಿಂದ ನಮನಮೂನಿ ಸಾಬೂನು ಪುಡಿ ವಾಸನಿ ತಂಗಾಳಿ ಜೊತಿಗೆ ಬೀಸಿ ಬರ್ತದ.

ಬಿಸಿರೊಟ್ಟಿ ಕಲ್ಲನ್‌ಚಟ್ನಿ, ತಾಳಸಿದ ಪಲ್ಯ, ಒಣಪಲ್ಲೆ (ಚೌಳಿಕಾಯಿ, ಬುಡಮಿಕಾಯಿ, ಹೀರಿಕಾಯಿ, ಮುಲಂಗಿಕಾಯಿ, ಬದನಿಕಾಯಿ) ಮಸ್ತ್ ಬಳ್ಳೊಳ್ಳಿ ಒಗ್ಗರಣಿ ಕೊಟ್ರ ಸಾಕು. ಕಾಳಿನ ಕೂಡ ಗಟ್ಟಿ ಮೊಸರು ರಾತ್ರಿ ಹೆಪ್ಪು ಹಾಕಿದ್ದು ಮುಂಜೇನಿಗೆ, ಮುಂಜೇನಿ ಹೆಪ್ಪಾಕಿದ್ರ ಮಧ್ಯಾಹ್ನಕ್ಕ, ಮಧ್ಯಾಹ್ನ ಹೆಪ್ಪಾಕಿದ್ರ ರಾತ್ರಿ ಊಟಕ್ಕ ಮೊಸರು



ಹೋಟೆಲ್‌ನಲ್ಲಿ ಹಲೀಮ್ ತಯಾರಿ